# ಬಿಸಿಲ ಬೇಗೆಯೂ, ಬಣ್ಣದ ಹಕ್ಕಿಗಳೂ..



ನಾವೇನೋ ಇಂತಿಂಥ ಜಾತಿಯ ಹಕ್ಕಿಗಳು ಬರುತ್ತವೆ ಎನ್ನುತ್ತೇವೆ. ಆದರೆ ಈ ಹಕ್ಕಿಗಳಿಗೆ ಜಾತಿ ಬೇಧವಿಲ್ಲ, ಬಣ್ಣಗಳ, ಆಕಾರದ ಅಹಂಕಾರವಿಲ್ಲ. ನಾನು ನೀನೆಂಬ ಭಾವನೆಯೂ ಇಲ್ಲ.

ಚಿತ್ರ–ಲೇಖನ:
**ಎಚ್. ಸತೀಶ್**



ಸತೀಶ ಸಾರಕ್ಕಿ ಸುಮಾರು ವರುಷಗಳಿಂದ  ಪಕ್ಷಿ ವೀಕ್ಷಣೆ ಮತ್ತು ವಿಶೇಷವಾಗಿ ಪಕ್ಷಿಗಳ ಛಾಯಾ ಚಿತ್ರಣ ಮಾಡಲು, ಬೆಂಗಳೂರಿಂದ ಸುಮಾರು 18 ಕಿಮೀ. ದೂರದಲ್ಲಿ ಕಾಡಿನಂಚಿನಲ್ಲಿರುವ ಒಂದು ಹಳ್ಳಿಯ ತೋಟದ ಬಳಿ, ಚಿಕ್ಕ ತೊಟ್ಟಿ ಮಾಡಿದ್ದಾರೆ. ಇದು ಎಲ್ಲ ಪಕ್ಷಿಗಳಿಗೂ ನೀರಿನ ಸೆಲೆ. ಇಲ್ಲಿ ಬಗೆ ಬಗೆಯ ಪಕ್ಷಿಗಳು ದಿನಾಲೂ ಬಂದು ನೀರು ಕುಡಿದು, ದಣಿವಾರಿಸಿಕೊಳ್ಳುತ್ತವೆ. ಈ ಚಿಕ್ಕದಾದ ತೊಟ್ಟಿ (ಪಕ್ಷಿಗಳಿಗೆ ಈಜು ಕೊಳ!) ಯಲ್ಲಿ ದಿನಾಲೂ ಹತ್ತು ಹಲವಾರು ಹಕ್ಕಿಗಳು ಬಂದು ಜಲಕ್ರೀಡೆಯಲ್ಲೂ ತೊಡಗುತ್ತವೆ.

ಆರಂಭದಲ್ಲಿ ಅಷ್ಟಾಗಿ ಪಕ್ಷಿಗಳು ಬರುತ್ತಿರಲಿಲ್ಲ . ಸ್ವಲ್ಪ ದಿನಗಳು ಉರುಳುತ್ತಿದ್ದಂತೆಯೇ ಹಲವು ಪ್ರಭೇದದ ಪಕ್ಷಿಗಳು ಬರತೊಡಗಿದವು. ಈಗ ಸುಮಾರು 85 ಜಾತಿಯ ಪಕ್ಷಿಗಳು ನೀರು ಕುಡಿಯಲು ಬರುತ್ತಿವೆ. ಅವುಗಳಲ್ಲಿ ಮುಖ್ಯವಾಗಿ, ಪಿಕಳಾರ, ಮಡಿವಾಳ, ಚಿಟ್ಟು ಮಡಿವಾಳ, ಸಣ್ಣ ಕೂಟ್ರ, ಕೆಂಪು ಕತ್ತಿನ ಕೆಂಚು ಕುಟ್ಟಿಗ, ಹೊಂಬೆನ್ನಿನ ಮರಕುಟಿಗ, ಭಾರದ್ವಾಜ, ಬೂದು ತಲೆ ಕಬ್ಬಕ್ಕಿ, ಕಾಡು ಗೊರವಂಕ, ಗೊರವಂಕ, ನೀಲಿ ಎಳೆಯ ಹಸಿರಕ್ಕಿ, ಕೆಂಪು ಕಿಬ್ಬೊಟ್ಟೆಯ ಪಿಕಳಾರ, ಕೆಮ್ಮೀಸೆ ಪಿಕಳಾರ, ಕಂಡು ನೊಣ ಹಿಡುಕ ಮುಂತಾದವು ಸೇರಿವೆ.

(8ನೇ ಪುಟ ನೋಡಿ)